ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರಾದ ಜಯಚಂದ್ರರವರು ಪ್ರಸ್ತಾಪ ಮಾಡಿರುವ ವಿಚಾರ ನೇರವಾಗಿ ವ್ಯವಸಾಯ ಇಲಾಖೆಗೆ ಬರುವುದಿಲ್ಲ ವ್ಯವಸಾಯ ಮಂತ್ರಿಯವರ ಪರವಾಗಿ ನಾನು ಉತ್ತರ ನೀಡುತ್ತಿದ್ದೇನೆ ಪತಾವಿನ ಕಾಯಿನ್ನು ಹಣ್ಣು ಪತಾಡುವುದಕ್ಕೋಸ್ಕರ ಉಪಯೋಗಿಸುವ ರಾಸಾಯನಿಕ ವಸ್ತು ಏನು ಇದೆ ಇದನ್ನು ಸೇವನೆ ಮಾಡುವುದರಿಂದ ಮಾನವನಿಗೆ ಆನಾರೋಗ್ಯವಾಗುತ್ತದೆ ಎನ್ನುವಂತಹ ಭೀತಿಯನ್ನು ವ್ಯಕ್ತಪಡಿಸಿದ್ದೀರಿ. ಮಾನ್ಯ ಆರೋಗ್ಯ ಸಚಿವರ ಇಲಾಖೆಗೆ ಇದನ್ನು ಕಳಿಸಿಕೊಟ್ಟು ಆ ರೀತಿ ಯಾವುದೇ ಪ್ರಕರಣಗಳು ನಿರ್ದಿಷ್ಟವಾಗಿ ಬಂದ ಪಕ್ಷದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ತಿಳಿಸುತ್ತೇನೆ. ಈ ರಾಸಾಯನಿಕ ವಸ್ತುವನ್ನು ಸೇವನೆ ಮಾಡುವುದರಿಂದ ಆಗುವ ಆನಾಹುತವನ್ನು ತಪ್ಪಿಸಲು ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ.

AN HON. MEMBER.—Is it a written reply of the Government?

SRI T. N. NARASIMHA MURTHY.—It is a very responsible reply of the Government. What all he has raised, I have replied on behalf of the Government.

೪ ರಾಜ್ಯದ ಹೊಟೇಲುಗಳಲ್ಲಿ ಂಂಡಿ ತಿನಿಸುಗಳ ಬೆಲೆ ಏರಿಕೆಯ ಬಗ್ಗೆ ಕಟ್ಟುನಿಟ್ಟಾದ ಕಾರ್ಯಕ್ರಮ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷೀಣಿಯವರೆ, ಬೆಂಗಳೂರಿನ, ಮಂಗಳೂರಿನ ಆದೇರೀತಿ ರಾಜ್ಯದ ಪ್ರಮುಖ ನಗರಗಳಲ್ಲಿ ಹೋಟೆಲುಗಳಲ್ಲಿ ತಿಂಡಿತಿನಿಸುಗಳ, ಆದೇ ರೀತಿ ಊಟದ ದರಗಳನ್ನು ತಮ್ಮ ಇಚ್ಛಾನುಸಾರ ಏರಿಸುತ್ತಲೇ ಇದ್ದಾರೆ. ಇದನ್ನು ಕೇಳುವವರೇ ಇಲ್ಲದೆ ಹೋಗಿದ್ದಾರೆ. ಹೀಗೆ ದಿನದಿಂದ ದಿನಕ್ಕೆ ಹೋಟೆಲುಗಳಲ್ಲಿ ದರಗಳನ್ನು ಏರಿಸುತ್ತಾ ಹೋಗುವುದರಿಂದ ಜನಸಾಮಾನ್ಯರಿಗೆ, ಕೂಲಿಗಾರರಿಗೆ, ಬಡವರಿಗೆ ತುಂಬಾ ಅನ್ಯಾಯವಾಗುತ್ತದೆ. ಸರ್ಕಾರ ಸಕ್ಕರೆ, ಮೈದಾ, ಗೋಧಿ ಇನ್ನಿತರ ಸಾಮಾಗ್ರಿಗಳನ್ನು ನಿಯಂತ್ರಿತ ಬೆಲೆಗೆ ಹೋಟೆಲಿನವರಿಗೆ ಕೊಡುವಷ್ಟು ಕೊಡುತ್ತಿಲ್ಲವೆ? ಹೀಗಿದ್ದರೂ ಈ ರೀತಿಯಲ್ಲಿ ಸ್ವೇಚ್ಛೆಯ ಬೆಲೆ ಏರಿಕೆ ಹಾನಿಕಾರಕ. ಈ ಕುರಿತು ಸರ್ಕಾರ ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ಹಾಕಲೇಬೇಕು. ಇನ್ನು ಆರೋಗ್ಯದ ದೃಷ್ಟಿಯಿಂದ ಕೂಡ ಹೋಟೆಲ್‌ಗಳಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಶುಚಿಯ ಬಗ್ಗೆ ಯಾವ ನಿಗಾ ಕೂಡ ಇರುವುದಿಲ್ಲ. ಇದನ್ನೆಲ್ಲಾ ಸರಿಪಡಿಸುವುದು ಅತಿ ಪ್ರಾಮುಖ್ಯವಾಗಿದೆ. ಈ ಕುರಿತು ಆಹಾರ ಮಂತ್ರಿಗಳ ಗಮನ ಸೆಳೆಯುತ್ತೇನೆ.

SRI AZEEZ SAIT (Minister for Food and Civil Supplies).— I make the following statement.

At present, the hotels and restaurants situated in Bangalore, Mangalore and other places in the State are not taking rice, wheat, sugar and other such food materials from Government at controlled prices. On the other hand, they are buying the same from the open market by paying prices prevailing in the market. Therefore, it is felt that it would not be in the interest of public at large to control the prices of food items supplied in hotels. If it is done, then the quality of food items is likely to deteriorate and secondly many hotels are likely to close down, thereby throwing out of employment a large number of poor and uneducated persons. In fact, the economic of supply and demand govern the prices of food items in various types of hotels and restaurants. Those who can afford only cheaper food items, they go to hotels where such food items are available, which includes roadside hotels, Dhaba, etc., and for expensive food items, they go to 'Star' hotels where such food is available. Therefore, it may not be wise and judicious to control

the prices of food items served in various hotels and restaurants. Besides hotels and restaurants are now being treated as an 'industry'. Hence, they are required to manage on business lines i.e., profit and loss basis.

Regarding the hygiene in the hotels and restaurants it is stated that it comes under the control of local self governing bodies viz., the Municipalities and Corporations. The Health Departments of the Municipalities and Corporations will be requested through the concerned Administrative Department of the Government to take measures for improving the hygiene in the hotels and restaurants.

ಖಾಸಗಿ ಕಾರ್ಯಕಲಾಪಗಳು

ರಾಜ್ಯದಲ್ಲಿ ನಿಸರ್ಗ ಸಂಪತ್ತಾದ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣ ಗೊಳಿಸಲು ಒತ್ತಾಯ

† ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷಿಣಿಯವರೆ. ಈ ನಿರ್ಣಯದ ಬಗ್ಗೆ ನಾನು ಈಗಾಗಲೇ ಹೋದ ಸಭೆಯಲ್ಲಿ ಚರ್ಚೆಯನ್ನು ಪ್ರಾರಂಭಿಸಿದ್ದೇನೆ. ಈ ನಿರ್ಣಯ ಈ ಸಭೆಯಲ್ಲಿ ಬಂದು ಒಂದು ಪಂತದಲ್ಲಿ ಚರ್ಚೆಯು ಪಸ್ತುವಾಗಿ ಇಲ್ಲಿ ಇದೆ ಈ ನಿರ್ಣಯ ಯಾಪ ಹಂತಕ್ಕೆ ತಲುಪಿದೆ ಎಂದು ಗೊತ್ತಿಲ್ಲ. ಏಕೆಂದರೆ ಇನ್ನೂ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಬೇಪವರಿದ್ದಾರೆ. ಈ ನಿರ್ಣಯ ಅತಿಶೀಘ್ರವಾಗಿ ಬಹುಮತದಿಂದ ತೀರ್ಮಾನವಾಗುತ್ತದೆಯೇ ಅಥವಾ ಆಲ್ಪ ಮತದಿಂದ ಬಿದ್ದುಹೋಗುತ್ತದೆಯೇ ಗೊತ್ತಿಲ್ಲ. ಈ ಸಭೆ ಅತ್ಯಂತ ಸಾರ್ವಭೌಮತ್ವವನ್ನು ಹೊಂದಿರತಕ್ಕ ಸಭೆ. ಈ ಸಭೆಯಲ್ಲಿ ಈ ಒಂದು ನಿರ್ಣಯವನ್ನು ಮಂಡಿಸಿ ಅದರ ಪರಿಸ್ಥಿತಿ ಏನಾಗಿದೆ ? ಸರ್ಕಾರ ಒಂದು ಕಡೆ ಸಭೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಈ ನಿರ್ಣಯವನ್ನು ಇನ್ನೂ ಸಭೆಯಲ್ಲಿಯೇ ಇಟ್ಟಿರುವಾಗ ತರಾತುರಿಯಿಂದ ಸಚಿವ ಸಂಪುಟದ ಸಭೆಯಲ್ಲಿ, ಇನ್ನೂ ಸೂರಾರು ಪ್ರಮುಖವಾದಂಥ ಪ್ರಶ್ನೆಗಳ ಬಗ್ಗೆ ತೀರ್ಮಾನವನ್ನು ತೆಗೆದು ಕೊಳ್ಳದೆ ಅವೆಲ್ಲವೂ ಪಟ್ಟಿಯಿಂದ ಹಿಂದೆ ಸರಿದು ಈ ಗ್ರಾನೈಟ್ ಉದ್ಯಮವನ್ನು ಖಾಸಗೀಯವರಿಗೆ ವಹಿಸತಕ್ಕಂಥ. ಗುತ್ತಿಗೆ ಕೊಡತಕ್ಕಂಥ ನಿರ್ಣಯವನ್ನು ಸರ್ಕಾರದವರು ಕೈಗೊಂಡಿರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ, ನನಗೆ ಎರಡು ಸಂಶಯಗಳು ಉದ್ಭವವಾಗುತ್ತವೆ. ಈ ಸಭೆಗೆ ಅಗೌರವವನ್ನು ಸರ್ಕಾರ ತೋರಿಸಿ ಈ ಸಭೆಗೆ ಸರ್ಕಾರ ಚ್ಯುತಿ ತಂದಿದೆ. ಆದ್ದರಿಂದ ನಾನು ಪ್ರಥಮವಾಗಿ ಹಕ್ಕು ಚ್ಯುತಿ ಆರೋಪವನ್ನು ಮಾಡುತ್ತಿದ್ದೇನೆ. ನಾವು ಹಕ್ಕು ಚ್ಯುತಿ ನಿರ್ಣಯವನ್ನು ತೆಗೆದುಕೊಂಡು ಬರುತ್ತೇವೆಂದು ಹೇಳಿದರೆ, ಆ ನಿರ್ಣಯವನ್ನು ಸಭೆ ಸರ್ಕಾರಕ್ಕೆ ಒಪ್ಪಿಸಬೇಕಾಗುತ್ತದೆ. ನಿಜವಾಗಿಯೂ ಇಂಥ ಒಂದು ಎತ್ತರವಾದಂಥ ಉನ್ನತವಾದಂತಪರಂಪರೆಯನ್ನು ನಾವು ನಡೆಸಿಕೊಂಡು ಬಂದಿದ್ದೇವೆ. ಈ ಪರಂಪರೆಗೆ ಕೊಡಲಿಪೆಟ್ಟು ಹಾಕಿದ್ದಾರೆ. ಪ್ರಜಾಪ್ರಭುತ್ವದ ಒಂದು ಮನೆ ಇದು. ಈ ಮನೆಗೆ ಇರತಕ್ಕಂಥ ಘನತೆ ಗಾಂಭೀರ್ಯ ಒಂದು ವ್ಯಕ್ತಿತ್ವಕ್ಕೆ ಅಪಚೇಳನ ಮಾಡಿ ನೀತಿ ನಿಯಮಗಳನ್ನು ಗಾಳಿಗೆ ತೂರಿ ತರಾತುರಿಯಿಂದ ಇಂಥ ಒಂದು ನಿರ್ಣಯವನ್ನು ತರತಕ್ಕಂಥ ಅವಶ್ಯಕತೆಯಾದರು ಏನು ಇತ್ತು ಎಂದು ನಾನು ಕೇಳಬೇಕಾಗುತ್ತದೆ ? ಇಂಥ ಒಂದು ಪ್ರಶ್ನೆಯನ್ನು ಎತ್ತಿ ಮಾತನಾಡುತ್ತಿರುವಾಗ ಇದನ್ನು ತಾವು ಗಮನಕ್ಕೆ ತೆಗೆದುಕೊಂಡು ನಮಗೆ ಮಾರ್ಗದರ್ಶನವನ್ನು ಕೊಡಬೇಕು. ಅಧ್ಯಕ್ಷರೇ ತಾವು ಈ ಸಭೆಯ ಅಧ್ಯಕ್ಷರಾಗಿದ್ದೀರಿ. ಈ ಸಭೆಯ ಘನತೆಯನ್ನು ಈ ಸಭೆಯ ಸಾರ್ವಭೌಮತ್ವವನ್ನು ಎತ್ತಿ ಹಿಡಿಯತಕ್ಕಂಥ ಒಂದು ಶಕ್ತಿಯಾಗಿ ತಾವು ಕಂಕಣತಿದ್ದೀರಿ. ನನಗಂತೂ ಈ ಸಭೆಗೆ ಸರ್ಕಾರದಿಂದ ಅಪಹೇಳನವಾಗಿದೆ ಅಪಚಾರವಾಗಿದೆ ಎಂದೆನಿಸಂತ್ತದೆ. ಇವರು ಈ ಸಭೆಯ ಘನತೆಗೆ ಅತ್ಯಂತ ಘೋರ ಅನಾಯ ಮಾಡಿದ್ದಾರೆ. ಅಲ್ಲದೆ ಈ ಸಭೆಯ ಹಕ್ಕಿಗೆ ಸಮಗ್ರವಾದ ಹಕ್ಕುಚ್ಯುತಿ ತಂದಿದ್ದಾರೆ. ಅಂದಮೇಲೆ ನಾನು ತಮ್ಮನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಅಧ್ಯಕ್ಷರೇ ಒಂದು ಕಡೆ ಈ ನೈಸರ್ಗಿಕ ಸಂಪತ್ತನ್ನು ನಾಶಪಡಬಾರದೆಂದು, ನೈಸರ್ಗಿಕ ಸಂಪತ್ತಿನ ನಾಶವನ್ನು ತಪ್ಪಿಸಬೇಕೆಂದು ನಿರ್ಣಯ ಇದೆ. ನೈಸರ್ಗಿಕ ಸಂಪತ್ತಿನ ನಾಶವನ್ನು ತಪ್ಪಿಸಬೇಕಾದರೆ ಸಮಗ್ರ ಗ್ರಾನೈಟ್ ಹಗಲು ದರೋಡೆಯನ್ನು ತಪ್ಪಿಸಬೇಕು. ಈ ಹಗಲು ದರೋಡೆಯನ್ನು ನಿಲ್ಲಿಸುವುದಕ್ಕೋಸ್ಕರವಾಗಿ ರಾಷ್ಟ್ರೀಕರಣ ಮಾಡಬೇಕಾಗುತ್ತದೆಂದು ಈ